
## ಅಭ್ಯಾಸ ಬಲ



ಅನೇಕ ಊರುಗಳಲ್ಲಿ ಗಂಡಹೆಂಡಿರ ಜೋಡಿ ಒಂದು ಆಟವನ್ನು ಪ್ರದರ್ಶಿಸುತ್ತಿದ್ದರು. ಗಂಡನು ತನ್ನ ಹೆಂಡತಿಯನ್ನು ಹಲಗೆಯೊಂದರ ಆಚೆ ನಿಲ್ಲಿಸುತ್ತಿದ್ದನು. ಅವಳ ಮೇಲೆ ಬಾಣ ಗಳನ್ನು ಬಿಡುತ್ತಿದ್ದನು. ವಿಶೇಷವೆಂದರೆ, ಎಲ್ಲ ಬಾಣಗಳೂ ಹೆಂಡತಿಯ ಶರೀರವನ್ನು ಮುಟ್ಟದೆ, ಹಲಗೆಗೆ ಮಾತ್ರ ಚುಚ್ಚಿಕೊಳ್ಳುತ್ತಿದ್ದವು. ವರ್ಷಾನುಗಟ್ಟಲೆ ಗಂಡಹೆಂಡಿರು ಈ ಆಟವನ್ನೇ ತೋರಿಸುತ್ತಿದ್ದರು. ಹೀಗಾಗಿ ಅವರಿಗೆ ಅದು ಪಳಗಿಹೋಗಿಬಿಟ್ಟಿತ್ತು.

ಒಂದು ಸಲ ಗಂಡ ಮತ್ತು ಹೆಂಡತಿಯರ ನಡುವೆ ದೊಡ್ಡ ಜಗಳವಾಯಿತು. ಅವತ್ತು ಗಂಡನು ಪ್ರದರ್ಶನಕ್ಕೆ ಹೋಗುವ ಮುಂಚೆ ಹೀಗೆ ಯೋಚಿಸಿದ: "ಜಗಳ ಇನ್ನು ಕೊನೆಗೊಳ್ಳುತ್ತದೆ. ಇವತ್ತು ಇವಳ ಎದೆಯ ಭಾಗಕ್ಕೆ ಬಾಣಹೊಡೆದು ಮುಗಿಸಿಬಿಡುತ್ತೇನೆ." ಹಾಗೆಂದು ಕೊಂಡು ಪ್ರದರ್ಶನಕ್ಕೆ ಅವನು ಬಂದನು. ತನ್ನ ಮನಸ್ಸನ್ನು ಮತ್ತಷ್ಟು ಗಟ್ಟಿಮಾಡಿಕೊಂಡನು. "ಇದು ನನ್ನ ದೃಢನಿಶ್ಚಯವೇ ಸರಿ" ಎಂದು ಅಂದುಕೊಂಡನು.


ಪ್ರದರ್ಶನ ಆರಂಭವಾಯಿತು. ಗಂಡನು ತನ್ನ ಹೆಂಡತಿಯತ್ತ ಒಂದಾದ ಮೇಲೊಂದರಂತೆ ಗುರಿಯಿಟ್ಟು ಬಾಣಗಳನ್ನು ಬಿಟ್ಟನು. ಅವಳನ್ನು ಕೊಲ್ಲಬೇಕೆಂದು, ಎದೆಯ ಕಡೆಗೇ ಹೊಡೆಯುತ್ತಿದ್ದನು. ಆದರೆ ಆಶ್ಚರ್ಯವೋ ಆಶ್ಚರ್ಯ. ಅವುಗಳಲ್ಲಿ ಒಂದು ಬಾಣ ಕೂಡ ಅವಳ ದೇಹವನ್ನು ಚುಚ್ಚಲೇ ಇಲ್ಲ. ಪ್ರತಿನಿತ್ಯದ ಪ್ರದರ್ಶನದಂತೆ, ಅವೆಲ್ಲವೂ ಹಲಗೆಗೇ ಚುಚ್ಚಿಕೊಳ್ಳುತ್ತಿದ್ದವು.

ವರ್ಷಾನುಗಟ್ಟಲೆ ಗಂಡನು ಸಾಧಿಸಿದ್ದ ಅಭ್ಯಾಸದ ಸಂಸ್ಕಾರ ಎಷ್ಟು ಪ್ರಬಲವಾಗಿತ್ತು ಎಂದರೆ, ಅವನು ತನ್ನ ಹೆಂಡತಿಗೆ ಒಂದು ಬಾಣ ಬಿಡಲೂ ಆಗುತ್ತಿರಲಿಲ್ಲ. ಹಾಗಾಗಿ ಕೋಪವಶದಿಂದ ಅವನು ಮಾಡಲು ಹೊರಟಿದ್ದ ಕೊಲೆ ತಪ್ಪಿದಂತಾಯಿತು.

**ನಾವು ರೂಢಿಸಿಕೊಳ್ಳುವ ಒಳ್ಳೆಯ ಅಭ್ಯಾಸವು ಕೆಟ್ಟ ಕೆಲಸ ಮಾಡುವುದರಿಂದ ನಮ್ಮನ್ನು ತಡೆಯಬಲ್ಲುದು.**

**ಸಂಗ್ರಹ:** ಎಲ್.ಎಸ್. ಹೆಗಡೆ, ಪುಟ್ಟಮನೆ

## ಭಾರತದ ಆಧ್ಯಾತ್ಮಿಕ ಪರಂಪರೆ ~ ಕಣಾದ



ಕಣಾದನು ಸುಪ್ರಸಿದ್ಧವಾದ ವೈಶೇಷಿಕ ದರ್ಶನದ ಪ್ರತಿಪಾದಕ. ಅವನು ಹುಟ್ಟಿದ್ದು ಗುಜರಾತಿನ ಪ್ರಭಾಸ ಕ್ಷೇತ್ರದಲ್ಲಿ. ಇವನ ಕಾಲ ಕ್ರಿ.ಪೂ. ೬ ನೇ ಶತಮಾನ ಎಂದು ವಿದ್ವಾಂಸರು ಹೇಳುತ್ತಾರೆ. ಕಣ ಎಂದರೆ ಅಣು. ಎಲ್ಲಕ್ಕಿಂತಲೂ ಸೂಕ್ಷ್ಮವಾದ ಅಣುಗಳಿವೆ ಎಂಬ ಸಿದ್ಧಾಂತವನ್ನು ಈತನು ಪ್ರತಿಪಾದನೆ ಮಾಡಿದನು. ಹಾಗೆಂದೇ ಇವನಿಗೆ ಕಣಾದ ಎಂದು ಹೆಸರಾಯಿತು. ಇವನು ಬಹಳ ದೊಡ್ಡ ತಪಸ್ವಿ ಕೂಡ. ಕೇವಲ ಆಹಾರದ ಕಣಗಳ ಮೇಲೆ ಅವನು ಜೀವಿಸಿದ್ದನಂತೆ. ಹೀಗೆ ಕೂಡ ಅವನಿಗೆ ಕಣಾದ ಎಂದು ಕರೆಯಲಾಗಿದೆ. ವೈಶೇಷಿಕ ದರ್ಶನವು ಮೂಲ ದ್ರವ್ಯಗಳ ಸ್ವರೂಪವನ್ನು ವಿವರಿಸುತ್ತದೆ. ಈ ದ್ರವ್ಯಗಳಿಂದ ಇಡೀ ಪ್ರಪಂಚ ಉಂಟಾಗಿದೆ. ಅಂತಹ ಒಂಬತ್ತು ದ್ರವ್ಯಗಳು ಯಾವುವೆಂದರೆ, **ಭೂಮಿ, ನೀರು, ಬೆಳಕು, ಗಾಳಿ, ಆಕಾಶ, ಕಾಲ, ಅವಕಾಶ (ಜಾಗ), ಮನಸ್ಸು ಮತ್ತು ಆತ್ಮ.** ಅವುಗಳಲ್ಲಿ ಮೊದಲ ನಾಲ್ಕು ವಿಭಾಗಗಳು ನಿತ್ಯವಾದ ಮತ್ತು ಕಣ್ಣಿಗೆ ಕಾಣಿಸಿದ ಅಣುಗಳಿಂದ ಕೂಡಿವೆ ಎನ್ನುವುದು ಕಣಾದನ ಅಭಿಪ್ರಾಯ.

# ೨೦೦೮–೨೦೦೯ ರ ಸಾಲಿನ ರಾಮಕೃಷ್ಣ ಮಿಷನ್ನಿನ ವಾರ್ಷಿಕ ವರದಿ

**ರಾ**ಮಕೃಷ್ಣ ಮಿಷನ್ನಿನ ೧೦೦ ನೆಯ ವಾರ್ಷಿಕ ಸರ್ವ ಸದಸ್ಯರ ಸಭೆಯು ಬೇಲೂರು ಮಠದಲ್ಲಿ, ೨೦.೧೨.೨೦೦೯ ರಂದು ಜರುಗಿತು. ರಾಮಕೃಷ್ಣ ಮಿಷನ್ ಮೇ ೪, ೧೯೦೯ ರಂದು ನೋಂದಾವಣೆಗೊಂಡಿತು. ಹೀಗಾಗಿ ಈ ವರ್ಷ ಇದಕ್ಕೆ ನೂರು ವರ್ಷಗಳು ಸಂದಿವೆ.

ಈ ವರ್ಷ ಒರಿಸ್ಸಾ ರಾಜ್ಯದ **ಹಟಮನಿಗುಡ** ಎಂಬಲ್ಲಿ ಒಂದು ನೂತನ ಮಿಷನ್ ಕೇಂದ್ರವನ್ನು ಸ್ಥಾಪಿಸಲಾಯಿತು.

**ಶಿಕ್ಷಣ ಕ್ಷೇತ್ರ:** ಈ ವರ್ಷ ಆರಂಭಗೊಂಡ ಯೋಜನೆಗಳ ವಿವರ: ೧. **ಶಾರದಾಪೀಠದ ವಿದ್ಯಾಮಂದಿರ, ರಹರಾ**ಗಳಲ್ಲಿ ಸ್ನಾತಕೋತ್ತರ ಪದವಿಗಳ ಆರಂಭ ೨. **ಕೊಲ್ಕತಾದ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್**ನಲ್ಲಿ ಸಂವಹನ ಜರ್ಮನ್, ಸಂವಹನ ಚೈನೀಸ್ ಮತ್ತು ಚೈನೀಸ್ ಭಾಷೆಗಳ ಕೋರ್ಸ್‌ಗಳ ಪ್ರಾರಂಭ ೩. **ಕೊಯಮತ್ತೂರು** ಕೇಂದ್ರದಲ್ಲಿ ಉದ್ಯಮಗಳು ಪ್ರಾಯೋಜಿಸಿರುವ, ಶಾಲೆಗಳಿಂದ ಹೊರಬಿದ್ದಿರುವ ಮಕ್ಕಳಿಗೆ ಕುಶಲತೆಯ ತರಬೇತಿ ಕಾರ್ಯಕ್ರಮಗಳು, ಕಟ್ಟಡ ನಿರ್ಮಾಣದಲ್ಲಿ ಕುಶಲತೆಯ ತರಬೇತಿ ೪. **ಲಕ್ನೋ** ಕೇಂದ್ರದ ವಿವೇಕಾನಂದ ಪಾಲಿಕ್ಲಿನಿಕ್‌ನಲ್ಲಿ ಪ್ಲಾಸ್ಟಿಕ್ ಸರ್ಜರಿ ಮತ್ತು ಪೆಥಾಲಜಿ ಕೋರ್ಸ್‌ಗಳು ೫. **ಕೊಲ್ಕತಾದ ಸೇವಾ ಪ್ರತಿಷ್ಠಾನದಲ್ಲಿ** ಬಿ.ಎಸ್‌ಸಿ ನಂತರದ ನರ್ಸಿಂಗ್ ಕಾಲೇಜು.

**ವೈದ್ಯಕೀಯ ಕ್ಷೇತ್ರ:** ೧. **ಕೊಲ್ಕತಾದ ಸೇವಾಪ್ರತಿಷ್ಠಾನದಲ್ಲಿ** ಎಂ.ಆರ್.ಐ ಘಟಕ ೨. **ಲಕ್ನೋ** ಕೇಂದ್ರದ ವಿವೇಕಾನಂದ ಪಾಲಿಕ್ಲಿನಿಕ್‌ನಲ್ಲಿ ೨೪ ಹಾಸಿಗೆಗಳ ಆರ್ಥೋಪಿಡಿಕ್ ವಾರ್ಡ್ ೩. **ನರೇಂದ್ರಪುರ ಕೇಂದ್ರ**ದಲ್ಲಿ ಆಯುರ್ವೇದ ಪಂಚಕರ್ಮ ಘಟಕ ೪. **ಬೃಂದಾವನದ** ಆಸ್ಪತ್ರೆಯಲ್ಲಿ ಫಿಸಿಯೋಥೆರಪಿ ಘಟಕ ೫. **ಪುರುಲಿಯಾ** ಕೇಂದ್ರದಲ್ಲಿ ಮೊಬೈಲ್ ವೈದ್ಯಕೀಯ ಘಟಕ.

**ಗ್ರಾಮೀಣಾಭಿವೃದ್ಧಿ :** ೧. **ಚಿರಾಪುಂಜಿ** ಕೇಂದ್ರದ ವತಿಯಿಂದ ೨೦೦ ಗ್ರಾಮಸ್ಥರಿಗೆ ೨೦೦ ಜೇನುಸಾಕಾಣಿಕೆ ಪೆಟ್ಟಿಗೆಗಳು ಮತ್ತು ಇತರ ಸಾಧನಗಳ ವಿತರಣೆ ೨. **ಪುರುಲಿಯಾ** ಕೇಂದ್ರದ ಮೂಲಕ ಅಯೋಧ್ಯಾ ಬೆಟ್ಟಗಳ ತಪ್ಪಲಿನಲ್ಲಿ ಎರಡು ತಡೆ ಅಣೆಕಟ್ಟುಗಳ ನಿರ್ಮಾಣ ೩. **ನಾರಾಯಣಪುರ** ಕೇಂದ್ರದಿಂದ ಛತ್ತೀಸ್‌ಘಡ್ ಜಿಲ್ಲೆಯಲ್ಲಿ ೭೯ ಆದಿವಾಸಿ ಕುಟುಂಬಗಳ ೧೭೬ ಎಕರೆಗಳಷ್ಟು ಹೊಲದಲ್ಲಿ ನೀರಾವರಿ ಒದಗಿಸಲು ಒಂದು ಸಣ್ಣ ಅಣೆಕಟ್ಟು ಮತ್ತು ಮೂರು ಏತ ನೀರಾವರಿ ವ್ಯವಸ್ಥೆಗಳ ನಿರ್ಮಾಣ. ೪. ಬಂಗಾಳದ ಉತ್ತರ ೨೪ ಪರಗಣ ಜಿಲ್ಲೆಯಲ್ಲಿ **ಶಾರದಾಪೀಠ ಕೇಂದ್ರದ ಜನಶಿಕ್ಷಾ ಮಂದಿರದ** ವತಿಯಿಂದ ಗ್ರಾಮೀಣ ಬಡಜನರ ಹಾನಿಗೊಳಗಾದ ೨೫ ಮನೆಗಳ ನವೀಕರಣ ೬. **ನರೇಂದ್ರಪುರದ ಲೋಕಶಿಕ್ಷಾ ಕೇಂದ್ರದ** ಹಲವು ಯೋಜನೆಗಳು: ವಿಶೇಷ ಆರೋಮಾಟಿಕ್ ಪ್ಲಾಂಟೇಷನ್ ತರಬೇತಿ, ಬಡತನ ನಿರ್ಮೂಲನ ಯೋಜನೆಗಳಾದ ಭತ್ತದ ಕೃಷಿಯಲ್ಲಿ ನೂತನ ವಿಧಾನಗಳ ಅಳವಡಿಕೆ, ಫ್ಲುರೈಡ್ ನಿವಾರಣೆ ಕಾರ್ಯಕ್ರಮ, ರಾಷ್ಟ್ರೀಯ ಹಸ್ತ ಸ್ವಚ್ಛತಾ ಕಾರ್ಯಕ್ರಮ ಮುಂತಾದವು.

**ರಾಮಕೃಷ್ಣ ಮಠ :** ೧. ಕೇರಳದ **ಹರಿಪಾಡ್** ಮತ್ತು ಪಶ್ಚಿಮ ಬಂಗಾಳದ **ರಾಜರ್‌ಹಾಟ್ ವಿಷ್ಣುಪುರ**ದಲ್ಲಿ ನೂತನ ಕೇಂದ್ರಗಳು ೨. ಕೊಲ್ಕತಾದ **ಕಾಂಕುರ್‌ಗಾಚಿ** ಕೇಂದ್ರದ ಮೂಲಕ ದೃಶ್ಯ–ಶ್ರವ್ಯ ಮಾಧ್ಯಮದ ಮೂಲಕ ವ್ಯಕ್ತಿತ್ವವಿಕಸನ ಕಾರ್ಯಕ್ರಮ ೩. ಪಶ್ಚಿಮಬಂಗಾಳದ **ಬಾರಾಸತ್** ಕೇಂದ್ರದ ಮೂಲಕ ಮೊಬೈಲ್ ವೈದ್ಯಕೀಯ ಘಟಕದ ಆರಂಭ ೪. ಕರ್ನಾಟಕದ **ಹಲಸೂರು** (ಬೆಂಗಳೂರು) ಕೇಂದ್ರದ ಮೂಲಕ ನೇತ್ರಚಿಕಿತ್ಸಾ ಕೇಂದ್ರ ಮತ್ತು ಯುವಜಾಗೃತಿ ಕಾರ್ಯಕ್ರಮ. ೫. **ರಾಜ್‌ಕೋಟ್** ಕೇಂದ್ರದಲ್ಲಿ ನೇತ್ರಚಿಕಿತ್ಸಾ ಕೇಂದ್ರ.

**ವಿದೇಶಗಳಲ್ಲಿ :** ೧. ರಾಮಕೃಷ್ಣ ಮಠವು **ರಷ್ಯಾ ದೇಶದ ಸೈಂಟ್ ಪೀಟರ್ಸ್‌ಬರ್ಗ್** ಎಂಬಲ್ಲಿ ಕೇಂದ್ರವೊಂದನ್ನು ಆರಂಭಿಸಿದೆ. ೨. **ದಕ್ಷಿಣ ಆಫ್ರಿಕಾದ ಡರ್ಬನ್** ಕೇಂದ್ರವು ವಾಸಿಯಾಗದ ವ್ಯಾಧಿಗಳಿಗೆ ತುತ್ತಾದವರಿಗೆ ೩೫ ಹಾಸಿಗೆಗಳುಳ್ಳ ಉಪಚಾರಗೃಹವನ್ನು ಆರಂಭಿಸಿದೆ. ೩. **ಜರ್ಮನಿ ಕೇಂದ್ರವು** ಫ್ರಾಂಕ್‌ಫರ್ಟ್ ನಗರದ ಹತ್ತಿರದ ಮುಹಲ್‌ಹೈಮ್ ಎಂಬಲ್ಲಿನ ಕಟ್ಟಡವೊಂದಕ್ಕೆ ತನ್ನ ಕಾರ್ಯಚಟುವಟಿಕೆಗಳನ್ನು ಸ್ಥಳಾಂತರಿಸಿದೆ. ೪. **ಜಪಾನ್ ಕೇಂದ್ರವು** ಶ್ರೀಭಾಗವತ, ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರು ಮತ್ತು ವೇದಾಂತ – ಈ ವಿಷಯಗಳ ಮೇಲೆ ಜಪಾನಿ ಭಾಷೆಯಲ್ಲಿ ಮೂರು ಪುಸ್ತಕಗಳನ್ನು ಪ್ರಕಟಿಸಿದೆ. ೫. **ಬಾಂಗ್ಲಾ ದೇಶದಲ್ಲಿ, ಮೈಮೆನ್‌ಸಿಂಗ್** ಕೇಂದ್ರವು ಕಂಪ್ಯೂಟರ್ ಕೇಂದ್ರವೊಂದನ್ನು ಆರಂಭಿಸಿದೆ; **ದಿನಾಜ್‌ಪುರ್** ಕೇಂದ್ರವು ತನ್ನ ವಿದ್ಯಾರ್ಥಿಗೃಹಕ್ಕಾಗಿ ನೂತನ ಕಟ್ಟಡವನ್ನು ನಿರ್ಮಿಸಿದೆ; **ಢಾಕಾ** ಕೇಂದ್ರವು ತನ್ನ ಪ್ರಾಥಮಿಕ ಶಾಲೆಯನ್ನು ಪ್ರೌಢಶಾಲೆಯಾಗಿ ಪರಿವರ್ತಿಸಿಕೊಂಡಿದೆ.

**ಈ ವರ್ಷದ ಒಟ್ಟಾರೆ ಸಾಧನೆ:** ಈ ವರ್ಷ ಮಠ ಮತ್ತು ಮಿಷನ್ ವತಿಯಿಂದ, **ಪರಿಹಾರ ಮತ್ತು ಪುನರ್ವಸತಿ** ಕಾರ್ಯಗಳನ್ನು ದೇಶದ ಹಲವೆಡೆ ನಡೆಸಲಾಯಿತು. ಇದಕ್ಕೆ ೬ . ೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದು, ೧೬ . ೧೬ ಗ್ರಾಮಗಳಿಗೆ ಸೇರಿದ, ೨.೪೯ ಲಕ್ಷ ಕುಟುಂಬಗಳ ೧೦ . ೨೯ ಲಕ್ಷ ಜನರು ಇದರ ಪ್ರಯೋಜನ ಪಡೆದಿದ್ದಾರೆ. ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ವೃದ್ಧ, ವ್ಯಾಧಿಗ್ರಸ್ತ, ಅನಾಥ ಜನರಿಗೆ ಧನಸಹಾಯ ಮುಂತಾದ **ಸಮಾಜಕಲ್ಯಾಣ ಕಾರ್ಯಕ್ರಮಗಳಿಗೆ** ೯.೫೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ನಮ್ಮ ೧೫ ಆಸ್ಪತ್ರೆಗಳು, ೧೨೫ ಔಷಧಾಲಯಗಳು ಮತ್ತು ೫೩ ಸಂಚಾರಿ ವೈದ್ಯಕೀಯ ಘಟಕಗಳ ಮೂಲಕ ೭೯.೦೫ ಲಕ್ಷ ಜನರಿಗೆ **ವೈದ್ಯಕೀಯ ಸೇವೆಯನ್ನು** ಒದಗಿಸಲಾಗಿದೆ. ಇದಕ್ಕಾಗಿ ೭೭.೫೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. **ಶೈಕ್ಷಣಿಕ ಕಾರ್ಯದಲ್ಲಿ,** ಶಿಶುವಿಹಾರದಿಂದ ಹಿಡಿದು ವಿಶ್ವವಿದ್ಯಾನಿಲಯದವರೆಗೆ ಇರುವ ಶೈಕ್ಷಣಿಕ ಕೇಂದ್ರಗಳಲ್ಲಿ, ೪.೮೪ ಲಕ್ಷ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಇದಕ್ಕೆ ತಗಲಿರುವ ಖರ್ಚು ೧೪೪.೫೩ ಕೋಟಿ ರೂಪಾಯಿಗಳು. ಅನೇಕ **ಗ್ರಾಮೀಣ ಮತ್ತು ಬುಡಕಟ್ಟು ಜನರ ಅಭಿವೃದ್ಧಿ ಯೋಜನೆಗಳನ್ನು** ಕೈಗೊಳ್ಳಲಾಗಿದ್ದು, ಒಟ್ಟು ೨೬ . ೧೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ನಮ್ಮೆಲ್ಲ ಸದಸ್ಯರಿಗೂ ಮತ್ತು ಸ್ನೇಹಿತರಿಗೂ, ಅವರ ಸಹಕಾರ ಮತ್ತು ಸಹಾಯಕ್ಕಾಗಿ ಕೃತಜ್ಞತೆಗಳು.

೨೦.೧೨.೨೦೦೯

**ಸ್ವಾಮಿ ಪ್ರಭಾನಂದ**
ಪ್ರಧಾನ ಕಾರ್ಯದರ್ಶಿಗಳು